# ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963

(ಕರ್ನಾಟಕ ರಾಜ್ಯಪತ್ರ, ಗುರುವಾರ, ಮೇ 4, 2006, ಭಾಗ – IVಎ, ಪುಟ 685 ರಿಂದ 697ರ ವರೆಗೆ ಪ್ರಕಟಿಸಲಾಗಿದೆ.)

**ವಿಷಯಾನುಕ್ರಮಣಿಕೆ**

**ಪ್ರಕರಣಗಳು :**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳ ಮಂಜೂರಾತಿ
3ಎ. ಲೋಕಸಭೆ ಮತ್ತು ರಾಜ್ಯವಿಧಾನ ಸಭೆಯ ಚುನಾವಣಾ ದಿವಸದಂದು ರಜಾದಿನಗಳ ಮಂಜೂರಾತಿ
4. ನಿಯೋಜಕರು ಇನ್‌ಸ್ಪೆಕ್ಟರ್‌ಗೆ ವಿವರಪತ್ರವನ್ನು ಕಳುಹಿಸತಕ್ಕದ್ದು
5. ಮಜೂರಿಗಳು
6. ಇನ್‌ಸ್ಪೆಕ್ಟರುಗಳು
7. ಇನ್‌ಸ್ಪೆಕ್ಟರ್‌ಗಳ ಅಧಿಕಾರಗಳು
8. ದಂಡನೆಗಳು
9. ಇನ್‌ಸ್ಪೆಕ್ಟರ್‌ಗೆ ಅಡ್ಡಿಯನ್ನುಂಟುಮಾಡಿದ್ದಕ್ಕಾಗಿ ದಂಡನೆ
9ಎ. ಅಪರಾಧಗಳ ಸಂಜ್ಞೇಯತೆ
10. ವಿನಾಯಿತಿಗಳು
11. ಇತರ ಕಾನೂನು ಇತ್ಯಾದಿಗಳ ಮೇರೆಗಿನ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಬಾಧಕವಾಗದಿರುವುದು
11ಎ. ಅನುಸೂಚಿಯನ್ನು ತಿದ್ದುಪಡಿ ಮಾಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ
12. ನಿಯಮ ರಚನಾಧಿಕಾರ
13. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯವಿಧಾನ ಮಂಡಲದ ಮುಂದೆ ಇಡತಕ್ಕದ್ದು

**ಅನುಸೂಚಿ**

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## I

**1963ರ ಅಧಿನಿಯಮ 24.**– ಪ್ರಸ್ತುತ, ಪ್ರತಿ ವರ್ಷ ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳನ್ನು ಘೋಷಿಸಲು ರಾಜ್ಯದ ಅನೇಕ ಕೈಗಾರಿಕಾ ಸಂಸ್ಥೆಗಳಲ್ಲಿ ಏಕ ರೂಪವಾದ ಪದ್ಧತಿ ಜಾರಿಯಲ್ಲಿಲ್ಲ. ಪ್ರತಿ ವರ್ಷ ಜನವರಿ 26ರಂದು ಗಣರಾಜ್ಯ ದಿನವನ್ನು ಮತ್ತು ಆಗಸ್ಟ್ 15ರಂದು ಸ್ವಾತಂತ್ರ್ಯ ದಿನವನ್ನು ಬದಲಿ ರಜಾ ದಿನಗಳನ್ನಾಗಿ ಗೊತ್ತುಪಡಿಸದೆ ಹೆಚ್ಚುವರಿ ಮಜೂರಿ ಸಹಿತ ರಜಾ ದಿನಗಳೆಂದು, ಗೊತ್ತುಪಡಿಸಬೇಕೆಂದು ರಾಜ್ಯದಲ್ಲಿನ ಎಲ್ಲ ಕೈಗಾರಿಕಾ ಸಂಸ್ಥೆಗಳಿಗೆ ವಿನಂತಿಸಿ ಸರ್ಕಾರವು ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸುತ್ತಿದ್ದರೂ, ಕೆಲವು ಖಾಸಗಿ ಕೈಗಾರಿಕಾ ಸಂಸ್ಥೆಗಳು ಅಂಥ ರಜಾ ದಿನಗಳನ್ನು ವೇತನ ಸಹಿತ ರಜಾ ದಿನಗಳೆಂದು ಘೋಷಿಸುವ ಸಂಭವ ಉಂಟು.

ಭಾರತ ಸರ್ಕಾರವು, ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳನ್ನು ಮಜೂರಿ ಸಹಿತ ರಜಾ ದಿನಗಳೆಂದು ಆಚರಿಸುವಂತೆ ಒತ್ತಾಯಿಸಲು ಯುಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುವುದರಿಂದ ಮತ್ತು ರಾಷ್ಟ್ರೀಯ ಹಾಗೂ ಕೆಲವು ಇತರ ಪ್ರಮುಖ ಹಬ್ಬಗಳು ಹೊಂದಿರುವ ಮಹತ್ವದ ದೃಷ್ಟಿಯಿಂದ ಈ ಸಂಬಂಧವಾಗಿ ನಮ್ಮ ರಾಜ್ಯದಲ್ಲಿ ಒಂದು ಕಾನೂನು ಇರುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1962ನೇ ಡಿಸೆಂಬರ್ 5ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ-IV-2ಎ ನಲ್ಲಿ, ಪುಟ 7ರಲ್ಲಿ, ಸಂಖ್ಯೆ: 244 ಎಂದು ಪ್ರಕಟಿಸಲಾಗಿದೆ).

## II

**1975ರ ತಿದ್ದುಪಡಿ ಮಾಡುವ ಅಧಿನಿಯಮ 1.**- ಮೈಸೂರು ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963ರ 3ನೇ ಪ್ರಕರಣದ ಅಡಿಯಲ್ಲಿ, ಪ್ರತಿಯೊಬ್ಬ ನೌಕರನಿಗೆ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಜನವರಿ 26ರಂದು ಮತ್ತು ಆಗಸ್ಟ್ 15ರಂದು- ಈ ಎರಡು ರಾಷ್ಟ್ರೀಯ ರಜಾ ದಿನಗಳನ್ನು ಉಪಯೋಗಿಸಿಕೊಳ್ಳಲು ಅವಕಾಶ ನೀಡಲಾಗಿದೆ. ರಾಷ್ಟ್ರೀಯ ಕಾರ್ಮಿಕ ಆಯೋಗವು ಸಲಹೆ ಮಾಡಿದಂತೆ ಅಕ್ಟೋಬರ್ 2 ರಂದು (ಮಹಾತ್ಮಗಾಂಧೀಜಿಯವರ ಜನ್ಮ ದಿನ) ಇನ್ನೊಂದು ರಾಷ್ಟ್ರೀಯ ರಜಾ ದಿನಕ್ಕಾಗಿ ಉಪಬಂಧ ಕಲ್ಪಿಸಲು ಪ್ರಸ್ತಾವಿಸಲಾಗಿದೆ.

ಈ ಅಧಿನಿಯಮದ 5ನೇ ಪ್ರಕರಣದ (3)ನೇ ಉಪಪ್ರಕರಣದ ಪರಂತುಕದ ಮೇರೆಗೆ, ಒಬ್ಬ ನೌಕರನು, ಅಂಥ ರಜಾ ದಿನಕ್ಕೆ ನಿಕಟಪೂರ್ವದ ಮೂವತ್ತು ದಿನಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿಲ್ಲದಿದ್ದರೆ, ಅನುಮತಿಸಲಾದ ರಜಾ ದಿನಗಳ ಪೈಕಿ ಯಾವುದೇ ದಿನಕ್ಕೆ ಅವನು ಯಾವುದೇ ಮಜೂರಿ ಪಡೆಯಲು ಹಕ್ಕು ಹೊಂದಿರುವುದಿಲ್ಲ. ಅಂದರೆ ಒಬ್ಬ ನೌಕರನು ಮೂವತ್ತು ದಿನಗಳ ಸೇವಾವಧಿಯನ್ನು ಪೂರ್ಣಗೊಳಿಸಿರಬಹುದಾದರೂ, ಅಂಥ ರಜಾ ದಿನದ ನಿಕಟ ಪೂರ್ವದಲ್ಲಿ ಮೂವತ್ತು ದಿನಗಳ ನಿರಂತರ ಸೇವಾವಧಿಯನ್ನು ಪೂರ್ಣಗೊಳಿಸಿರಬಹುದಾದರೂ, ಅಂಥ ರಜಾ ದಿನದ ನಿಕಟ ಪೂರ್ವದಲ್ಲಿ ಮೂವತ್ತು ದಿನಗಳ ನಿರಂತರ ಸೇವಾವಧಿಯನ್ನು ಪೂರ್ಣಗೊಳಿಸಿಲ್ಲದಿರಬಹುದಾದ ಸಂದರ್ಭಗಳಲ್ಲಿ ಅವನಿಗೆ ತೊಂದರೆಯುಂಟಾಗುತ್ತದೆ. ಆದ್ದರಿಂದ, ಆ ರಜಾ ದಿನಕ್ಕೆ ನಿಕಟ ಪೂರ್ವದ ತೊಂಬತ್ತು ದಿನಗಳ ನಿರಂತರ ಅವಧಿಯೊಳಗೆ ಮೂವತ್ತು ದಿನಗಳ ಒಟ್ಟು ಸೇವಾ ಅವಧಿಯ ಅಗತ್ಯತೆಯ ಬಗ್ಗೆ ಉಪಬಂಧ ಕಲ್ಪಿಸುವ ಸಲುವಾಗಿ ಈ ಪರಂತುಕಕ್ಕೆ ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಈ ಅಧಿನಿಯಮದ ಅಥವಾ ನಿಯಮಗಳ ಮೇರೆಗಿನ ಅಪರಾಧಗಳನ್ನು ಆ ಬಗ್ಗೆ ಬಂದ ದೂರಿನ ಮೇಲೆ ಮಾತ್ರವೇ ಮತ್ತು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಮೂಲಕ ಮಾತ್ರವೇ ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದೆಂದು ಉಪಬಂಧ ಕಲ್ಪಿಸಲು ಸಹ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1973ರ ಮಾರ್ಚ್ 14ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ-IV- 2ಎ ನಲ್ಲಿ, ಪುಟ 4ರಲ್ಲಿ, ಸಂಖ್ಯೆ 255 ಎಂದು ಪ್ರಕಟಿಸಲಾಗಿದೆ).

## III

**1985ರ ತಿದ್ದುಪಡಿ ಮಾಡುವ ಅಧಿನಿಯಮ 7.**- ಮುಖ್ಯಮಂತ್ರಿಗಳು 1982ರ ತಮ್ಮ ಬಜೆಟ್ ಭಾಷಣದಲ್ಲಿ ರಾಜ್ಯದಲ್ಲಿನ ಕೈಗಾರಿಕಾ ಕಾರ್ಮಿಕರಿಗೆ ಮೇ 1ನೇ ದಿನವನ್ನು ಮಜೂರಿ ಸಹಿತ ರಜೆ ಎಂಬುದಾಗಿ ಘೋಷಿಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರು.

ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963ರ 3ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ರಾಷ್ಟ್ರಪತಿಯವರ ಪೂರ್ವಾನುದೇಶಗಳನ್ನು ಪಡೆಯುವುದಕ್ಕಾಗಿ ಭಾರತ ಸರ್ಕಾರವನ್ನು ಸಂಪರ್ಕಿಸಿದಾಗ ಭಾರತ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಕೈಗಾರಿಕಾ ಸಂಸ್ಥೆಗಳ ಸಂಬಂಧದಲ್ಲಿ ಆ ದಿನವನ್ನು ರಜಾ ದಿನವೆಂಬುದಾಗಿ ಘೋಷಿಸಲು ತಾವು ಸಮ್ಮತಿಸುವುದಿಲ್ಲವೆಂದು ಅವರು ತಿಳಿಸಿದರು.

ಆದ್ದರಿಂದ, ಭಾರತ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಕೈಗಾರಿಕಾ ಸಂಸ್ಥೆಗಳನ್ನುಳಿದು ಕರ್ನಾಟಕ ರಾಜ್ಯದ ಕೈಗಾರಿಕಾ ಕಾರ್ಮಿಕರಿಗೆ ಮೇ 1ನೇ ದಿನವನ್ನು ಮಜೂರಿ ಸಹಿತ ರಜೆಯನ್ನಾಗಿ ಘೋಷಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1985ರ ಮಾರ್ಚ್ 20ನೇ ದಿನಾಂಕದ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV- 2ಎ ನಲ್ಲಿ, ಪುಟ 3ರಲ್ಲಿ, ಸಂಖ್ಯೆ 166 ಎಂದು ಪ್ರಕಟಿಸಲಾಗಿದೆ).

**IV**

**1986ರ ತಿದ್ದುಪಡಿ ಮಾಡುವ ಅಧಿನಿಯಮ 16**.- ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963ರ 6ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವು ಪ್ರಸ್ತುತ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಸ್ಥಳೀಯ ವ್ಯಾಪ್ತಿಯೊಳಗೆ ಪರಿಶೀಲಕರನ್ನು ನೇಮಕ ಮಾಡುವ ಮಟ್ಟಿಗೆ ಸೀಮಿತಗೊಂಡಿದೆ. ಹೀಗಾಗಿ ಯಾವುದೇ ಕೈಗಾರಿಕಾ ಸಂಸ್ಥೆ ಅಥವಾ ಅಂಥ ವರ್ಗದ ಸಂಸ್ಥೆಗಳಿಗೆ ಪರಿಶೀಲಕರನ್ನು ನೇಮಕ ಮಾಡುವ ಅಧಿಕಾರವನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಹಾಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಂಥ ಕೈಗಾರಿಕಾ ಸಂಸ್ಥೆಗಳ ಸಂಬಂಧದಲ್ಲಿ ಸ್ಥಳೀಯ ಪರಿಮಿತಿಗಳ ಸಲುವಾಗಿ ನೇಮಕಗೊಂಡ ಪರಿಶೀಲಕರ ಅಧಿಕಾರ ವ್ಯಾಪ್ತಿಯ ಸಮಾಪ್ತಿಯ ಬಗ್ಗೆ ಸಹ ಉಪಬಂಧವನ್ನು ಕಲ್ಪಿಸುವುದು ಅಗತ್ಯವಾಗುತ್ತದೆ.

3ನೇ ಪ್ರಕರಣದಲ್ಲಿನ ಸಂದಿಗ್ಧತೆಯನ್ನು ನಿವಾರಿಸುವುದು ಸಹ ಅಗತ್ಯವಾಗಿದ್ದು ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(1986ರ ಫೆಬ್ರವರಿ 3ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ-IV- 2ಎ ನಲ್ಲಿ, ಪುಟ 4ರಲ್ಲಿ, ಸಂಖ್ಯೆ 70 ಎಂದು ಪ್ರಕಟಿಸಲಾಗಿದೆ).

**V**

**1997ರ ತಿದ್ದುಪಡಿ ಮಾಡುವ ಅಧಿನಿಯಮ 28**.- ಚುನಾವಣಾ ಆಯೋಗದ ಸಲಹೆಗಳ ಮೇರೆಗೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ ಕೇಂದ್ರ ಅಧಿನಿಯಮ 43) ಇದರ ಅಡಿಯಲ್ಲಿ ಸಂಸತ್ತಿನ ಅಥವಾ ವಿಧಾನಸಭೆಯ ಯಾವುದೇ ಚುನಾವಣಾ ಕ್ಷೇತ್ರಗಳಿಗೆ ನಡೆಯುವ ಸಾರ್ವತ್ರಿಕ ಅಥವಾ ಉಪ ಚುನಾವಣೆಗಳ ಸಂದರ್ಭದಲ್ಲಿ ಕಾರ್ಮಿಕರು, ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಕೂಲವಾಗುವಂತೆ ಅವರಿಗೆ ಮಜೂರಿ ಸಹಿತ ರಜೆ ಅನುಮತಿ ನೀಡುವಂತೆ ನಿಯೋಜಕರನ್ನು ಕಡ್ಡಾಯಗೊಳಿಸಲು ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963 ಇದನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಹಬ್ಬಗಳ ಪಟ್ಟಿಯ ಪೈಕಿ ಮಜೂರಿ ಸಹಿತ ರಜಾ ದಿನಗಳನ್ನು ಆಯ್ಕೆ ಮಾಡಿಕೊಳ್ಳಲು ನಿಯೋಜಕರಿಗೆ ಮತ್ತು ನೌಕರರಿಗೆ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**(ಲಾ18 ಎಲ್‌ಜಿಎನ್ 97 ರಿಂದ ಪಡೆಯಲಾಗಿದೆ)**.

## 1963ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 24

(1963ರ ಜುಲೈ 11ನೇ ದಿವಸದಂದು [1][ಕರ್ನಾಟಕ ರಾಜಪತ್ರ][1]ದಲ್ಲಿ ಮೊದಲು ಪ್ರಕಟವಾಯಿತು.)

# [1][ಕರ್ನಾಟಕ][1] ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963

(1963ರ ಜೂನ್ ಇಪ್ಪತ್ತಾರನೇ ದಿವಸದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯಿತು.)

(1975ರ 1, 1985ರ 7, 1986ರ 16 ಮತ್ತು 1997ರ 28 ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯ][1]ದಲ್ಲಿ, ಕೈಗಾರಿಕಾ ಸಂಸ್ಥೆಗಳಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳನ್ನು ಮಂಜೂರು ಮಾಡುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1]ದಲ್ಲಿ, ಕೈಗಾರಿಕಾ ಸಂಸ್ಥೆಗಳಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳನ್ನು ಮಂಜೂರು ಮಾಡುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾಲ್ಕನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1]ಕ್ಕೆ ವ್ಯಾಪ್ತವಾಗುತ್ತದೆ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು.

1. ಅಧಿನಿಯಮವು 14ನೇ ಆಗಸ್ಟ್ 1963 ರಂದು ಅಧಿಸೂಚನೆ ಮೂಲಕ ಜಾರಿಗೆ ಬಂದಿತು. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ದಿವಸ" ಎಂದರೆ, ಮಧ್ಯರಾತ್ರಿಯಲ್ಲಿ ಪ್ರಾರಂಭವಾಗುವ ಇಪ್ಪತ್ನಾಲ್ಕು ಗಂಟೆಗಳ ಅವಧಿ;

(2) "ಉದ್ಯೋಗಿ" ಎಂದರೆ,-

(i) ಉದ್ಯೋಗದ ನಿಬಂಧನೆಗಳನ್ನು ಸ್ಪಷ್ಟಪಡಿಸಿರಲಿ ಅಥವಾ ಇಂಗಿತವಾಗಿರಲಿ, ಬಾಡಿಗೆ ಮೇಲೆ ಅಥವಾ ಪ್ರತಿಫಲಕ್ಕಾಗಿ ಯಾವುದೇ ಕುಶಲ ಅಥವಾ ಅಕುಶಲ, ದೈಹಿಕ, ಮೇಲ್ವಿಚಾರಣೆ, ತಾಂತ್ರಿಕ ಅಥವಾ ಲಿಪಿಕ ಕೆಲಸವನ್ನು ಮಾಡಲು ಯಾವುದೇ ಕೈಗಾರಿಕಾ ಸಂಸ್ಥೆಯಲ್ಲಿ ನೇಮಿಸಿಕೊಂಡ (ಅಪ್ರೆಂಟೀಸ್ ಒಳಗೊಂಡು) ಯಾರೇ ವ್ಯಕ್ತಿ;

(ii) ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಉದ್ಯೋಗಿಯೆಂದು ಘೋಷಿಸಬಹುದಾದ ಯಾವುದೇ ಕೈಗಾರಿಕಾ ಸಂಸ್ಥೆಯಲ್ಲಿ ನೇಮಕಗೊಂಡ ಯಾರೇ ವ್ಯಕ್ತಿ;

(3) ಕೈಗಾರಿಕಾ ಸಂಸ್ಥೆಗೆ ಸಂಬಂಧಪಟ್ಟಂತೆ ಬಳಸಿದಾಗ 'ನಿಯೋಜಕ' ಎಂದರೆ, ಯಾವುದೇ ಕೈಗಾರಿಕಾ ಸಂಸ್ಥೆಯ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣವನ್ನು ಹೊಂದಿರುವ ಮತ್ತು ಯಾವುದೇ ಕೈಗಾರಿಕಾ ಸಂಸ್ಥೆಯ ವ್ಯವಹಾರಗಳನ್ನು ಯಾರೇ ಇತರ ವ್ಯಕ್ತಿಗಳಿಗೆ (ವ್ಯವಸ್ಥಾಪಕ ಏಜೆಂಟ್, ವ್ಯವಸ್ಥಾಪಕ, ಸೂಪರಿಟೆಂಡೆಂಟ್ ಅಥವಾ ಯಾವುದೇ ಇತರ ಹೆಸರಿನಿಂದ ಕರೆಯಲಾಗಿರಲಿ)

-ವಹಿಸಿಕೊಟ್ಟಿದ್ದರೆ ಅಂತಹ ಇತರ ವ್ಯಕ್ತಿ;

(4) 'ಕೈಗಾರಿಕಾಸಂಸ್ಥೆ' ಎಂದರೆ,-

(i)[1][ಕರ್ನಾಟಕ][1] ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ರ 2ನೇ ಪ್ರಕರಣದ (ಇ) ಮತ್ತು (ಯು) ಖಂಡಗಳಲ್ಲಿ ಪರಿಭಾಷಿಸಿರುವಂತೆ ಯಾವುದೇ ಅಂಗಡಿ ಅಥವಾ ವಾಣಿಜ್ಯ ಸಂಸ್ಥೆ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ii) ಕಾರ್ಖಾನೆಗಳ ಅಧಿನಿಯಮ, 1948ರ (ಕೇಂದ್ರಾಧಿನಿಯಮ 1984ರ ಸಂಖ್ಯೆ LXIII) 2ನೇ ಪ್ರಕರಣದ (ಎಂ) ಖಂಡದಲ್ಲಿ ಪರಿಭಾಷಿಸಿರುವಂತೆ ಯಾವುದೇ ಕಾರ್ಖಾನೆ ಅಥವಾ ಆ ಅಧಿನಿಯಮದ 85ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಕಾರ್ಖಾನೆಯಾಗಿರುವುದಾಗಿ ಭಾವಿಸಿದಂಥ ಯಾವುದೇ ಸ್ಥಳ;

(iii) ಪ್ಲಾಂಟೇಷನ್ ಕಾರ್ಮಿಕ ಅಧಿನಿಯಮ, 1951ರ (ಕೇಂದ್ರಾಧಿನಿಯಮ 1951ರ ಸಂಖ್ಯೆ LXIX) 2ನೇ ಪ್ರಕರಣದ (ಎಫ್) ಖಂಡದಲ್ಲಿ ಪರಿಭಾಷಿಸಿದಂತೆ ಯಾವುದೇ ಪ್ಲಾಂಟೇಷನ್;

(iv) ಈ ಅಧಿನಿಯಮದ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಕೈಗಾರಿಕಾ ಸಂಸ್ಥೆಯೆಂದು ಘೋಷಿಸಬಹುದಾದಂಥ ಇತರ ಯಾವುದೇ ಸಂಸ್ಥೆ;

(5) 'ಇನ್‌ಸ್ಪೆಕ್ಟರ್' ಎಂದರೆ, 6ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಇನ್‌ಸ್ಪೆಕ್ಟರ್;

(6) 'ಅಧಿಸೂಚನೆ' ಎಂದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(7) 'ಮಜೂರಿಗಳು' ಎಂದರೆ ಹಣದ ರೂಪದಲ್ಲಿ ವ್ಯಕ್ತಪಡಿಸಬಹುದಾದ ಉದ್ಯೋಗದ ನಿಬಂಧನೆಗಳನ್ನು ಸ್ಪಷ್ಟಪಡಿಸಿರಲಿ ಅಥವಾ ಇಂಗಿತವಾಗಿರಲಿ, ಈಡೇರಿಸಿದ್ದರೆ ಅವನ ಉದ್ಯೋಗಕ್ಕೆ ಅಥವಾ ಅಂಥ ಉದ್ಯೋಗದಲ್ಲಿ ಅವನು ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಉದ್ಯೋಗಿಗೆ ಸಂದಾಯ ಮಾಡಬೇಕಾದಂಥ ಎಲ್ಲಾ ಪರಿಶ್ರಮಧನ, ಮತ್ತು ಆದರೆ ಇದರಲ್ಲಿ,-

(i) ಉದ್ಯೋಗಿಯು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವಂಥ ಭತ್ಯಗಳನ್ನು (ತುಟ್ಟಿಭತ್ಯವನ್ನು ಒಳಗೊಂಡು);

(ii) ಯಾವುದೇ ವಸತಿ ಸ್ಥಳಾವಕಾಶದ ಅಥವಾ ವಿದ್ಯುಚ್ಛಕ್ತಿ, ನೀರು ಸರಬರಾಜಿನ, ವೈದ್ಯಕೀಯ ಚಿಕಿತ್ಸೆಯ ಅಥವಾ ಇತರ ಸೌಲಭ್ಯದ ಅಥವಾ ಯಾವುದೇ ಸೇವೆಯ ಅಥವಾ ಆಹಾರಧಾನ್ಯಗಳ ಅಥವಾ ಇತರ ವಸ್ತುಗಳ ಯಾವುದೇ ರಿಯಾಯಿತಿ ಸರಬರಾಜಿನ ಮೌಲ್ಯವನ್ನು ಒಳಗೊಳ್ಳುತ್ತದೆ, ಆದರೆ,-

(ಎ) ಯಾವುದೇ ಬೋನಸ್‌ನ್ನು;

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ನಿಯೋಜಕನು ಯಾವುದೇ ಪಿಂಚಣಿ ನಿಧಿಗೆ ಅಥವಾ ಭವಿಷ್ಯನಿಧಿಗೆ ಅಥವಾ ಉದ್ಯೋಗಿಯ ಪ್ರಯೋಜನಕ್ಕಾಗಿ ಸಂದಾಯ ಮಾಡಿದ ಅಥವಾ ಮಾಡಬೇಕಾದ ಯಾವುದೇ ವಂತಿಗೆಯನ್ನು;

(ಸಿ) ಅವನ ಸೇವೆಯನ್ನು ಕೊನೆಗೊಳಿಸಿದಾಗ ಸಂದಾಯ ಮಾಡಬೇಕಾದ ಯಾವುದೇ ಉಪದಾನವನ್ನು;

(ಡಿ) ಅವನ ಉದ್ಯೋಗದ ಸ್ವರೂಪದಿಂದಾಗಿ ಅವನ ಬಗ್ಗೆ ಮಾಡಿದ ವಿಶೇಷ ವೆಚ್ಚವನ್ನು ವಹಿಸಲು ಉದ್ಯೋಗಿಗೆ ಸಂದಾಯ ಮಾಡಿದ ಯಾವುದೇ ಮೊತ್ತವನ್ನು;

(ಇ) ಯಾವುದೇ ಪ್ರಯಾಣ ರಿಯಾಯಿತಿಯನ್ನು

ಒಳಗೊಂಡಿರುವುದಿಲ್ಲ.

[1][3. **ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳ ಮಂಜೂರಾತಿ.**- (1) ಪ್ರತಿಯೊಬ್ಬ ಉದ್ಯೋಗಿಗೆ, ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ, ಜನವರಿ 26, ಆಗಸ್ಟ್ 15, ಅಕ್ಟೋಬರ್ 2ರಂದು ಒಂದು ಇಡೀ ದಿವಸದ ರಜೆಯನ್ನು ಮತ್ತು ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿ ಅಥವಾ ಕಾರ್ಮಿಕ ಸಂಘ ಇರದಿದ್ದಲ್ಲಿ ಉದ್ಯೋಗಿಗಳೊಂದಿಗೆ ಅಥವಾ ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಕೃತಗೊಳಿಸಿದ ಅವರ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಹಬ್ಬಗಳ ಪಟ್ಟಿ ಪೈಕಿ ನಿಯೋಜಕರು

ನಿರ್ದಿಷ್ಟಪಡಿಸಬಹುದಾದಂಥ ಹಬ್ಬಗಳಿಗಾಗಿ ಐದು ಇತರ ರಜಾದಿನಗಳಿಗೆ ಪ್ರತಿಯೊಂದಕ್ಕೂ ಇಡೀ ದಿವಸದ ರಜೆಯನ್ನು ಕೊಡತಕ್ಕದ್ದು:

ಪರಂತು, ಭಾರತ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಕೈಗಾರಿಕಾ ಸಂಸ್ಥೆಗಳ ಹೊರತು, ಅಂಥ ಇತರ ರಜಾದಿನಗಳ ಸಂಖ್ಯೆಯು, ಮೇ ಮೊದಲನೆಯ ದಿವಸ ಮತ್ತು ನವೆಂಬರ್ ಮೊದಲನೆಯ ದಿವಸ ಸೇರಿ ಏಳು ಆಗಿರತಕ್ಕದ್ದು.

(2) ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಹಬ್ಬಗಳಿಗೆ ರಜೆ ಕೊಡುವುದಕ್ಕೆ ಸಂಬಂಧಿಸಿದಂತೆ ನಿಯೋಜಕರ ಮತ್ತು ಉದ್ಯೋಗಿಗಳ ಅಥವಾ ಕಾರ್ಮಿಕ ಸಂಘಗಳ ನಡುವೆ ಯಾವುದೇ ಭಿನ್ನಾಭಿಪ್ರಾಯವಿದ್ದ ಸಂದರ್ಭದಲ್ಲಿ, ಸಂಬಂಧಪಟ್ಟ ಕಾರ್ಮಿಕ ಸಂಘವು, ನಿಯೋಜಕನು ಅಥವಾ ಉದ್ಯೋಗಿಗಳು, ಕೈಗಾರಿಕಾ ಸಂಸ್ಥೆ ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಇನ್‌ಸ್ಪೆಕ್ಟರ್‌ಗೆ, ಅವನ ತೀರ್ಮಾನಕ್ಕಾಗಿ ಆ ವಿವಾದವನ್ನು ಒಪ್ಪಿಸತಕ್ಕದ್ದು ಮತ್ತು ಈ ಬಗ್ಗೆ ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**3ಎ. ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಯ ಚುನಾವಣಾ ದಿವಸದಂದು ರಜಾದಿನಗಳ ಮಂಜೂರಾತಿ.–** 3ನೇ ಪ್ರಕರಣದಲ್ಲಿ ಏನೇ ಇದ್ದರೂ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43ನೇ ಕೇಂದ್ರ ಅಧಿನಿಯಮ)ರ ಮೇರೆಗೆ ಲೋಕಸಭೆಗೆ ಅಥವಾ ರಾಜ್ಯ ವಿಧಾನ ಸಭೆಗೆ ಸಾರ್ವತ್ರಿಕ ಚುನಾವಣೆ ನಡೆದಾಗ ಅಥವಾ ಲೋಕಸಭೆಯಲ್ಲಿನ ಅಥವಾ ರಾಜ್ಯ ವಿಧಾನಸಭೆಯಲ್ಲಿನ ಯಾವುದೇ ಆಕಸ್ಮಿಕ ಖಾಲಿಸ್ಥಾನವನ್ನು ತುಂಬುವುದಕ್ಕೆ ಚುನಾವಣೆ ನಡೆದಾಗ, ಅಂಥ ಚುನಾವಣೆಯು ನಡೆಯುವ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿರುವ ಪ್ರತಿಯೊಬ್ಬ ಉದ್ಯೋಗಿಗೆ (ಭಾರತ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಕೈಗಾರಿಕಾ ಸಂಸ್ಥೆಯಲ್ಲಿನ ಉದ್ಯೋಗಿಗೆ ಹೊರತು) ಅವನ ಮತಾಧಿಕಾರವನ್ನು ಚಲಾಯಿಸಲು ಅವನಿಗೆ ಸಾಧ್ಯವಾಗುವಂತೆ ಚುನಾವಣಾ ದಿವಸದಂದು ಒಂದು ದಿವಸದ ವೇತನ ಸಹಿತ ರಜೆಯನ್ನು ಕೊಡತಕ್ಕದ್ದು.][1]

1. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**4. ನಿಯೋಜಕರು ಇನ್‌ಸ್ಪೆಕ್ಟರ್‌ಗೆ ವಿವರಣೆ ಪತ್ರವನ್ನು ಕಳುಹಿಸತಕ್ಕದ್ದು.–** ಪ್ರತಿಯೊಬ್ಬ ನಿಯೋಜಕನು ಕೈಗಾರಿಕಾ ಸಂಸ್ಥೆಯು ಇರುವಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಇನ್‌ಸ್ಪೆಕ್ಟರ್‌ಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ, 3ನೇ ಪ್ರಕರಣದ ಮೇರೆಗೆ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಕೊಡಬೇಕಾದ ರಜಾ ದಿನಗಳನ್ನು ತೋರಿಸಿರುವ ಒಂದು ವಿವರಣಾ ಪತ್ರವನ್ನು ಕಳುಹಿಸಿಕೊಡತಕ್ಕದ್ದು ಮತ್ತು ಅದನ್ನು ಕೈಗಾರಿಕಾ ಸಂಸ್ಥೆಯ ಆವರಣದಲ್ಲಿ ಪ್ರದರ್ಶಿಸತಕ್ಕದ್ದು.

**5. ಮಜೂರಿಗಳು.–** (1) ತದ್ವಿರುದ್ಧವಾದ ಯಾವುದೇ ಕರಾರು ಇದ್ದಾಗ್ಯೂ, ಪ್ರತಿಯೊಬ್ಬ ಉದ್ಯೋಗಿಗೆ, [1][3ನೇ ಅಥವಾ 3ಎ ಪ್ರಕರಣದ][1] ಮೇರೆಗೆ ಅವನಿಗೆ ಕೊಟ್ಟ ಪ್ರತಿಯೊಂದು ರಜಾ ದಿವಸಕ್ಕೆ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

(2) [1][3ನೇ ಅಥವಾ 3ಎ][1] ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ರಜಾ ದಿನದಂದು ಉದ್ಯೋಗಿಯು ಕೆಲಸ ಮಾಡಿದರೆ ಅವನ ಇಚ್ಛೆಯಂತೆ, ಅವನು,–

1. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಮಜೂರಿಗಳ ಎರಡು ಪಟ್ಟಿಗೆ; ಅಥವಾ

(ಬಿ) ಅಂಥ ದಿವಸಕ್ಕಾಗಿ ಮಜೂರಿಗೆ ಮತ್ತು ಯಾವುದೇ ಇತರ ಯಾವುದೇ ದಿವಸದಂದು ಮಜೂರಿ ಸಹಿತ ಬದಲಿ ರಜೆಯನ್ನು ಬಳಸಿಕೊಳ್ಳಲು

– ಹಕ್ಕುಳ್ಳವನಾಗಿರತಕ್ಕುದು.

(3) (1)ನೇ ಉಪ-ಪ್ರಕರಣದಲ್ಲಿ ಅಥವಾ (2)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ದಿವಸಕ್ಕೆ ಅಥವಾ ಮಾಡಿದಷ್ಟು ಕೆಲಸಕ್ಕನುಸಾರದ ದರಗಳಲ್ಲಿ ಮಜೂರಿಗಳನ್ನು ಪಡೆಯುವ ಉದ್ಯೋಗಿಯು, [1][3ನೇ ಮತ್ತು 3ಎ ಪ್ರಕರಣದ][1] ಮೇರೆಗೆ ಕೊಟ್ಟ ಯಾವುವೇ ರಜಾ ದಿವಸಗಳಿಗಾಗಿ,–

1. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ನಿಯಮಿಸಿದ ರೀತಿಯಲ್ಲಿ ಲೆಕ್ಕಹಾಕಬೇಕಾದ, ಅವನ ಮಜೂರಿಗಳ ದೈನಂದಿನ ಸರಾಸರಿಗೆ ಸಮಾನವಾದ ದರದ ಮಜೂರಿಗೆ ಮಾತ್ರ;

(ii) ಅಂತಹ ಯಾವುದೇ ರಜಾ ದಿವಸದ ದಿನದಂದು ಅವನು ಕೆಲಸ ಮಾಡಿದರೆ (1)ನೇ ಖಂಡದಲ್ಲಿ ಹೇಳಲಾದ ದರದ ಎರಡುಪಟ್ಟಿಗೆ ಮಾತ್ರ ಅಥವಾ ಅದಕ್ಕೆ ಬದಲಾಗಿ, ಆ ಖಂಡದಲ್ಲಿ ಹೇಳಲಾದ ದರದಲ್ಲಿ ಮಜೂರಿಗಳನ್ನು ಪಡೆಯಲು ಮತ್ತು ಆ ದರದಲ್ಲಿ ಯಾವುದೇ ಇತರ ದಿವಸದಂದು ಮಜೂರಿಗಳ ಸಹಿತ ಬದಲಿ ರಜೆಯನ್ನು ಅವನು ಬಳಸಿಕೊಳ್ಳಲು

–ಹಕ್ಕುಳ್ಳವನಾಗಿರತಕ್ಕದ್ದು:

[1][ಪರಂತು, ಯಾರೇ ಅಂಥ ಉದ್ಯೋಗಿಯು ಜನವರಿ 26, ಆಗಸ್ಟ್ 15 ಮತ್ತು [2][ಅಕ್ಟೋಬರ್ 2ನೇ ಮತ್ತು 3ಎ ಪ್ರಕರಣದ ಮೇರೆಗೆ ಕೊಟ್ಟಿರುವ ರಜೆ][2] ಇವುಗಳನ್ನು ಹೊರತುಪಡಿಸಿ, 3ನೇ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ರಜಾ ದಿನಕ್ಕಾಗಿ ಯಾವುವೇ ಮಜೂರಿಗಳ ಸಂದಾಯಕ್ಕೆ, ಅಂಥ ರಜಾದಿನದ ನಿಕಟಪೂರ್ವದಲ್ಲಿ 90 ದಿವಸಗಳ ನಿರಂತರ ಅವಧಿಯಲ್ಲಿ 30 ದಿವಸಗಳ ಒಟ್ಟು ಅವಧಿಗಾಗಿ ನಿಯೋಜಕನ ಅಧೀನದಲ್ಲಿ ಅವನು ಸೇವೆಯಲ್ಲಿದ್ದ ಹೊರತು ಹಕ್ಕುಳ್ಳವನಾಗಿರತಕ್ಕದ್ದಲ್ಲ.][1]

1. 1975ರ ಅಧಿನಿಯಮ ಸಂಖ್ಯೆ 1ರ ಮೂಲಕ 23.1.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**ವಿವರಣೆ.**– ಈ ಪರಂತುಕದ ಉದ್ದೇಶಕ್ಕಾಗಿ, ಉದ್ಯೋಗಿಯು ಬಳಸಿಕೊಂಡ, ವಾರದ ಅಥವಾ ಯಾವುದೇ ಇತರ ರಜಾ ದಿವಸವನ್ನು ಅಥವಾ ಅಧಿಕೃತ ರಜೆಯನ್ನು, ಅದರಲ್ಲಿ ನಮೂದಿಸಿರುವ ಮೂವತ್ತು ದಿವಸಗಳ ಅವಧಿಯನ್ನು ಲೆಕ್ಕ ಹಾಕುವಾಗ ಸೇರಿಸತಕ್ಕದ್ದು.

**6. ಇನ್‌ಸ್ಪೆಕ್ಟರ್‌ಗಳು.**– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಪರಿಮಿತಿಗಳಿಗಾಗಿ [1][ಅಥವಾ ಆ ಪರಿಮಿತಿಗಳಲ್ಲಿರುವ ಒಂದು ಅಥವಾ ಹೆಚ್ಚು ಕೈಗಾರಿಕಾ ಸಂಸ್ಥೆಗಳಿಗಾಗಿ ಅಥವಾ ಕೈಗಾರಿಕಾ ಸಂಸ್ಥೆಗಳ ವರ್ಗಕ್ಕಾಗಿ][1] ಇನ್‌ಸ್ಪೆಕ್ಟರ್‌ಗಳಾಗಿರಲು ಅದು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ಅಥವಾ ಅಂಥ ವರ್ಗದ ವ್ಯಕ್ತಿಗಳನ್ನು ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು. 1[ಒಂದು ಅಥವಾ ಹೆಚ್ಚು ಕೈಗಾರಿಕಾ ಸಂಸ್ಥೆಗಳಿಗೆ ಅಥವಾ ಕೈಗಾರಿಕಾ ಸಂಸ್ಥೆಗಳ ವರ್ಗಕ್ಕೆ ಇನ್‌ಸ್ಪೆಕ್ಟರ್‌ನನ್ನು ನೇಮಕ ಮಾಡಿದ್ದರೆ ಅಂಥ ಇನ್‌ಸ್ಪೆಕ್ಟರ್‌ನು ಅಂಥ ಕೈಗಾರಿಕಾ ಸಂಸ್ಥೆಯ ಅಥವಾ ಕೈಗಾರಿಕಾ ಸಂಸ್ಥೆಗಳ ಅಥವಾ ಕೈಗಾರಿಕಾ ಸಂಸ್ಥೆಗಳ ಅಂಥ ವರ್ಗದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದೇ ಹೊರತು ಬೇರೆ ಯಾರೂ ಹೊಂದಿರತಕ್ಕದ್ದಲ್ಲ.][1]

1. 1986ರ ಅಧಿನಿಯಮ ಸಂಖ್ಯೆ 16ರ ಮೂಲಕ 8.5.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಪ್ರತಿಯೊಬ್ಬ ಇನ್‌ಸ್ಪೆಕ್ಟರ್‌ನನ್ನು ಭಾರತ ದಂಡ ಸಂಹಿತೆಯ (ಕೇಂದ್ರಾಧಿನಿಯಮ 1860ರ ಸಂಖ್ಯೆ XLV) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕನೌಕರನೆಂಬುದಾಗಿ ಭಾವಿಸತಕ್ಕದ್ದು.

**7. ಇನ್‌ಸ್ಪೆಕ್ಟರ್‌ಗಳ ಅಧಿಕಾರಗಳು.**– ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮಗಳಿಗೊಳಪಟ್ಟು, ಇನ್‌ಸ್ಪೆಕ್ಟರ್‌ನು, ಅವನು ನೇಮಕಗೊಂಡಿರುವಂಥ ಸ್ಥಳೀಯ ಪರಿಮಿತಿಗಳೊಳಗೆ [1][ಅಥವಾ ಅವನು ಯಾವ ಕೈಗಾರಿಕಾ ಸಂಸ್ಥೆಗಾಗಿ ಅಥವಾ ಕೈಗಾರಿಕಾ ಸಂಸ್ಥೆಗಳ ವರ್ಗಕ್ಕಾಗಿ ನೇಮಕಗೊಂಡಿರುವನೋ ಆ ಕೈಗಾರಿಕಾ ಸಂಸ್ಥೆಯು ಅಥವಾ ಕೈಗಾರಿಕಾ ಸಂಸ್ಥೆಗಳ ವರ್ಗವು ಇರುವ ಸ್ಥಳೀಯ ಪರಿಮಿತಿಗಳೊಳಗೆ][1],–

1. 1986ರ ಅಧಿನಿಯಮ ಸಂಖ್ಯೆ 16ರ ಮೂಲಕ 8.5.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ಎಲ್ಲ ಯುಕ್ತ ಕಾಲಗಳಲ್ಲಿ ಮತ್ತು ಅವನ ಜೊತೆಗೆ ಕರೆದುಕೊಂಡು ಹೋಗಲು ಅವನು ಯೋಗ್ಯವೆಂದು ಯೋಚಿಸುವ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸೇವೆಯಲ್ಲಿರುವ ವ್ಯಕ್ತಿಗಳ ಅಂಥ ಸಹಾಯಕರು ಯಾರಾದರೂ ಇದ್ದರೆ ಅವರೊಂದಿಗೆ ಕೈಗಾರಿಕಾ ಸಂಸ್ಥೆಯೆಂದು ಅವನು ನಂಬಲು ಕಾರಣವಿರುವಂಥ

[1][ಅಥವಾ ಸಂದರ್ಭಾನುಸಾರ, ಅವನನ್ನು ನೇಮಕ ಮಾಡಲಾಗಿರುವಂಥ ಕೈಗಾರಿಕಾ ಸಂಸ್ಥೆಯ ಅಥವಾ ಕೈಗಾರಿಕಾ ಸಂಸ್ಥೆಗಳ ಅಂಥ ವರ್ಗಕ್ಕೆ ಸೇರಿದ][1] ಯಾವುದೇ ಸ್ಥಳವನ್ನು ಪ್ರವೇಶಿಸಬಹುದು.

1. 1986ರ ಅಧಿನಿಯಮ ಸಂಖ್ಯೆ 16ರ ಮೂಲಕ 8.5.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವನು ಅವಶ್ಯವೆಂದು ಭಾವಿಸಬಹುದಾದಂಥ ಆವರಣಗಳ ಮತ್ತು ನಿಯಮಿಸಿದ ಯಾವುದೇ ರಿಜಿಸ್ಟರ್‌ಗಳ, ದಾಖಲೆಗಳ ಅಥವಾ ನೋಟೀಸುಗಳ ಅಂಥ ಪರೀಕ್ಷೆಯನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯ ಸಾಕ್ಷ್ಯವನ್ನು ಆ ಸ್ಥಳದಲ್ಲಿ ಅಥವಾ ಅನ್ಯಥಾ ತೆಗೆದುಕೊಳ್ಳಬಹುದು.

(ಸಿ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು:

ಪರಂತು, ಅವನನ್ನೇ ಅಪರಾಧಕ್ಕೆ ಗುರಿಮಾಡುವುದಕ್ಕೆ ಆಸ್ಪದಕೊಡುವ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ಸಾಕ್ಷ್ಯವನ್ನು ಕೊಡಲು ಈ ಪ್ರಕರಣದ ಮೇರೆಗೆ, ಯಾರನ್ನೂ ಅಗತ್ಯ ಪಡಿಸತಕ್ಕದ್ದಲ್ಲ.

**8. ದಂಡನೆಗಳು.-** 3ನೇ ಪ್ರಕರಣದ ಅಥವಾ [1][3ಎ ಪ್ರಕರಣದ][1] ಅಥವಾ 5ನೇ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾವನೇ ನಿಯೋಜಕನು ಮೊದಲನೇ ಅಪರಾಧಕ್ಕಾಗಿ [2][ಒಂದುನೂರ ಇಪ್ಪತ್ತೈದು ರೂಪಾಯಿಗಳ][2] ವರೆಗೆ ವಿಸ್ತರಿಸಬಹುದಾದ ಮತ್ತು ಎರಡನೇ ಮತ್ತು ತರುವಾಯದ ಅಪರಾಧಗಳಿಗಾಗಿ ಇನ್ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

1. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**9. ಇನ್‌ಸ್ಪೆಕ್ಟರ್‌ಗೆ ಅಡ್ಡಿಯನ್ನುಂಟುಮಾಡಿದ್ದಕ್ಕಾಗಿ ದಂಡನೆ:-** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ, ಇನ್‌ಸ್ಪೆಕ್ಟರ್‌ಗೆ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು ಚಲಾಯಿಸುವಾಗ, ಯಾರಾದರೂ, ಇನ್‌ಸ್ಪೆಕ್ಟರ್‌ಗೆ ಉದ್ದೇಶಪೂರ್ವಕವಾಗಿ ಅಡ್ಡಿಯುಂಟು ಮಾಡಿದರೆ ಅಥವಾ ಇನ್‌ಸ್ಪೆಕ್ಟರನು ಈ ಅಧಿನಿಯಮವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಅನುಸರಿಸುವಾಗ, ಯಾರಾದರೂ, ಅವನ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇರಬಹುದಾದಂಥ ಯಾವುದೇ ರಿಜಿಸ್ಟರನ್ನು, ದಾಖಲೆಯನ್ನು ಅಥವಾ ನೋಟೀಸನ್ನು ಇನ್‌ಸ್ಪೆಕ್ಟರ್‌ನು ಬರವಣಿಗೆಯಲ್ಲಿ ತಗಾದೆ ಮಾಡಿದಾಗ ಹಾಜರುಪಡಿಸಲು ತಪ್ಪಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

[1][**9ಎ ಅಪರಾಧಗಳ ಸಂಜ್ಞೇಯತೆ:-** (1) ಯಾವುದೇ ನ್ಯಾಯಾಲಯವು, ಇನ್‌ಸ್ಪೆಕ್ಟರನು ಬರವಣಿಗೆಯಲ್ಲಿ ಮಾಡಿಕೊಂಡ ದೂರಿನ ಮೇಲಲ್ಲದೆ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

(2) ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟರಿಗಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ವಿಚಾರಣೆ ಮಾಡತಕ್ಕದ್ದಲ್ಲ.][1]

1. 1975ರ ಅಧಿನಿಯಮ ಸಂಖ್ಯೆ 1ರ ಮೂಲಕ 23.1.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**10.ವಿನಾಯಿತಿಗಳು:-** ರಾಜ್ಯಸರ್ಕಾರವು, ಅಧಿಸೂಚನೆಯ ಮೂಲಕ, ಅದು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಯಾವುದೇ ಸಂಸ್ಥೆಯನ್ನು ಅಥವಾ ಸಂಸ್ಥೆಗಳ ವರ್ಗವನ್ನು ಅಥವಾ ವ್ಯಕ್ತಿಗಳನ್ನು ಅಥವಾ ವ್ಯಕ್ತಿಗಳ ವರ್ಗವನ್ನು ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧದಿಂದ ವಿನಾಯಿತಿಗೊಳಿಸಬಹುದು.

**11.ಇತರ ಕಾನೂನು ಇತ್ಯಾದಿಗಳ ಮೇರೆಗಿನ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಬಾಧಕವಾಗದಿರುವುದು.-** ಈ ಅಧಿನಿಯಮದಲ್ಲಿ ಇರುವುದಾವುದೂ, ಈ ಅಧಿನಿಯಮವು ಜಾರಿಗೆ ಬಂದಂಥ ದಿನಾಂಕದಂದು ಇತರ ಯಾವುದೇ ಕಾನೂನಿನ, ಕರಾರಿನ, ರೂಢಿಯ ಅಥವಾ ಆಚರಣೆಯ ಮೇರೆಗೆ ಯಾವನೇ ಉದ್ಯೋಗಿಯು ಹಕ್ಕುಳ್ಳವನಾಗಿರುವಂಥ ಯಾವುವೇ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ, ಅಂಥ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಅವನು ಈ ಅಧಿನಿಯಮದ ಮೇರೆಗೆ ಹಕ್ಕುಳ್ಳವನಾಗಿರಬಹುದಾದಂಥವುಗಳಿಗಿಂತ ಹೆಚ್ಚು ಅನುಕೂಲಕರವಾಗಿದ್ದರೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

[1][**11ಎ ಅನುಸೂಚಿಯನ್ನು ತಿದ್ದುಪಡಿ ಮಾಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ.-** ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.][1]

1. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**12.ನಿಯಮ ರಚನಾಧಿಕಾರ:-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ನಿಯಮವನ್ನು ರಚಿಸುವಾಗ, ಸರ್ಕಾರವು, ಆ ನಿಯಮದ ಉಲ್ಲಂಘನೆಯು [1][ಎರಡುನೂರಾ ಐವತ್ತು ರೂಪಾಯಿ][1] ಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

1. 1997ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**13. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯವಿಧಾನ ಮಂಡಲದ ಮುಂದೆ ಇಡತಕ್ಕದ್ದು.-** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 10ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಸಂದರ್ಭಾನುಸಾರ ಆ ನಿಯಮ ಅಥವಾ ಅಧಿಸೂಚನೆಯು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಭಾದಕವನ್ನುಂಟು ಮಾಡತಕ್ಕದ್ದಲ್ಲ.

## [1][ಅನುಸೂಚಿ

1. 1977ರ ಅಧಿನಿಯಮ ಸಂಖ್ಯೆ 28ರ ಮೂಲಕ 30.9.1997 ರಿಂದ ಜಾರಿಗೆ ಬರುವಂತೆ ಅನುಸೂಚಿಯನ್ನು ಸೇರಿಸಲಾಗಿದೆ.

**[3ನೇ ಪ್ರಕರಣವನ್ನು ನೋಡಿ]**

**ಹಬ್ಬಗಳ ಪಟ್ಟಿ**

1. ಹೊಸ ವರ್ಷದ ದಿನ
2. ಭೋಗೀ ಹಬ್ಬ
3. ಉತ್ತರಾಯಣ ಪುಣ್ಯಕಾಲ (ಸಂಕ್ರಾಂತಿ)
4. ಕನು ಹಬ್ಬ
5. ತ್ಯಾಗರಾಜ ಆರಾಧನೆ

6. ಪುರಂದರದಾಸರ ಪುಣ್ಯದಿನ
7. ಗರುಡ ಜಯಂತಿ
8. ರಥಸಪ್ತಮಿ
9. ವ್ಯಾಸ ಪೂರ್ಣಿಮೆ
10. ಮಹಾ ಶಿವರಾತ್ರಿ
11. ಹೋಳಿ ಹಬ್ಬ
12. ಪವಿತ್ರ ಶನಿವಾರ
13. ಗುಡ್ ಫ್ರೈಡೇ
14. ಷಬ್ಬ ಬಾರಾತ್
15. ಚಾಂದ್ರಮಾನ ಯುಗಾದಿ
16. ಸೌರಮಾನ ಯುಗಾದಿ
17. ಶ್ರೀರಾಮ ನವಮಿ
18. ಡಾ॥ ಅಂಬೇಡ್ಕರ್ ಜಯಂತಿ
19. ಮಹಾವೀರ ಜಯಂತಿ
20. ಮೇ ದಿನಾಚರಣೆ
21. ಚೈತ್ರ ಪೂರ್ಣಿಮೆ
22. ಷಬ್ - ಎ - ಖಾದರ್
23. ಜಮತ್ - ಉಲ್ - ವಿದಾ
24. ಶ್ರೀ ರಾಮಾನುಜಾಚಾರ್ಯ ತಿರುನಕ್ಷತ್ರ
25. ಬಸವ ಜಯಂತಿ
26. ರಂಜಾನ್
27. ಶಂಕರ ಜಯಂತಿ
28. ಬುದ್ಧ ಪೂರ್ಣಿಮೆ
29. ಬಕ್ರೀದ್
30. ವರ ಮಹಾಲಕ್ಷ್ಮೀ ವ್ರತ
31. ಮೊಹರಂ ಕಡೇ ದಿನ
32. ಉಪಾಕರ್ಮ
33. ಶ್ರೀಕೃಷ್ಣ ಜಯಂತಿ
34. ಸ್ವರ್ಣ ಗೌರಿ ವ್ರತ
35. ಗಣೇಶ ವ್ರತ
36. ತಿರು ಓಣಂ
37. ಅನಂತ ಪದ್ಮನಾಭ ವ್ರತ
38. ಮಹಾಲಯ ಅಮಾವಾಸ್ಯೆ
39. ಮಹಾನವಮಿ

40. ವಿಜಯದಶಮಿ
41. ಈದ್ - ಮಿಲಾದ್
42. ತುಲಾ ಸಂಕ್ರಮಣ
43. ನರಕ ಚತುರ್ದಶಿ
44. ಬಲಿಪಾಡ್ಯಮಿ
45. ಕನ್ನಡ ರಾಜ್ಯೋತ್ಸವ
46. ಉತ್ಥಾನ ದ್ವಾದಶಿ
47. ಗುರುನಾನಕ್ ಜಯಂತಿ
48. ಗೀತಾ ಜಯಂತಿ
49. ಶಿವ ದೀಪ
50. ಕ್ರಿಸ್‌ಮಸ್ ಈವ್
51. ಕ್ರಿಸ್‌ಮಸ್
52. ಮಾಧ್ವನವಮಿ.][1]

**ಅಧಿಸೂಚನೆ**

**ಬೆಂಗಳೂರು, ದಿನಾಂಕ:13ನೇ ಆಗಸ್ಟ್, 1963**

(ಶ್ರಾವಣ 22, ಶಕವರ್ಷ 1885) [ಸಂಖ್ಯೆ: ಪಿಎಲ್‌ಎಂ 189 ಎಲ್‌ಎಲ್‌ಇ 63]

ಮೈಸೂರು ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) ಅಧಿನಿಯಮ, 1963ರ (1963ರ ಮೈಸೂರು ಅಧಿನಿಯಮ ಸಂಖ್ಯೆ 24) 1ನೇ ಪ್ರಕರಣದ (3)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 14ನೇ ಆಗಸ್ಟ್, 1963ನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕ ಎಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಚ್.ಎಲ್. ಲಿಂಗರಾಜ ಅರಸ್**
ಸರ್ಕಾರದ ಉಪಕಾರ್ಯದರ್ಶಿ,
ಪಿ.ಎಚ್.ಎಲ್ ಮತ್ತು ಎಂ.ಐ.ಎ.ಡಿ.

# ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ನಿಯಮಗಳು, 1964

## ವಿಷಯಾನುಕ್ರಮಣಿಕೆ

**ನಿಯಮಗಳು:**


1. ಹೆಸರು
2. ಪ್ರಾರಂಭ
3. ಪರಿಭಾಷೆ
4. ಕಾರ್ಮಿಕ ಸಂಘಗಳು ಮತ್ತು ಕೆಲಸಗಾರರೊಂದಿಗೆ ಸಮಾಲೋಚಿಸುವ ರೀತಿ
5. ನಿಯೋಜಕನು ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ
6. 3ನೇ ಪ್ರಕರಣದ ಮೇರೆಗಿನ ವಿವಾದಗಳನ್ನು ತೀರ್ಮಾನಿಸುವುದು
7. ಇನ್‌ಸ್ಪೆಕ್ಟರ್‌ನಿಂದ ಅನುಮೋದನೆ
8. ಡಿಸೆಂಬರ್ 31ಕ್ಕೆ ಮುಂಚೆ ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ
9. ರಜಾ ದಿನಗಳಿಗೆ ಸಂದಾಯ ಮಾಡಬೇಕಾದ ಮಜೂರಿಗಳು
10. ಇನ್‌ಸ್ಪೆಕ್ಟರ್‌ರ ಕರ್ತವ್ಯಗಳು
11. ವಾ ರ್ಷಿಕ ವಿವರಪಟ್ಟಿಕೆಗಳು
12. ಹಾಜರಿಪಟ್ಟಿ
13. ದಂಡನೆಗಳು

ನಮೂನೆ-I
ನಮೂನೆ-II
ನಮೂನೆ-III
ನಮೂನೆ- IV
ನಮೂನೆ-V
ನಮೂನೆ-VI
} [xx ಬಿಟ್ಟುಬಿಡಲಾಗಿದೆ]

**ಅಧಿಸೂಚನೆಗಳು**

# ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ನಿಯಮಗಳು, 1964

(ಅಧಿಸೂಚನೆ ಸಂಖ್ಯೆ ಎಲ್‌ಡಿ 31 ಬಿಡಬ್ಲ್ಯೂ 91 (ಪಿ) ದಿನಾಂಕ 17–1–1998ರ ಮೂಲಕ ತಿದ್ದುಪಡಿಯಾದಂತೆ)

[1][ಅಧಿಸೂಚನೆ]

**ಬೆಂಗಳೂರು, ದಿನಾಂಕ 23ನೇ ಜನವರಿ 1965**

1. ಅಧಿಸೂಚನೆ ಸಂಖ್ಯೆ. ಎಚ್‌ಡಿ 198 ಟಿಎಂಟಿ 63 ದಿನಾಂಕ 23.1.1965 ಇದನ್ನು ಕರ್ನಾಟಕ ರಾಜ್ಯಪತ್ರ ದಿನಾಂಕ 4.2.1965 ರಲ್ಲಿ ಪ್ರಕಟಿಸಲಾಗಿದೆ.

**ಜಿಎಸ್‌ಆರ್ 373.–** ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1963, (ಕರ್ನಾಟಕ ಅಧಿನಿಯಮ 1963ರ 24)ರ 12ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ :–

**1. ಹೆಸರು.–** ಈ ನಿಯಮಗಳನ್ನು ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ನಿಯಮಗಳು, 1964 ಎಂದು ಕರೆಯತಕ್ಕದ್ದು.

**2. ಪ್ರಾರಂಭ.–** ಈ ನಿಯಮಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು.

**3. ಪರಿಭಾಷೆಗಳು.–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) ಅಧಿನಿಯಮ, 1963;

(ಬಿ) "ನಮೂನೆ ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಸಿ) "ಪ್ರಕರಣ" ಎಂದರೆ ಈ ಅಧಿನಿಯಮದ ಒಂದು ಪ್ರಕರಣ"

(ಡಿ) ಇದರಲ್ಲಿ ಬಳಸಿದ ಮತ್ತು ಪರಿಭಾಷಿಸಿಲ್ಲದ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅನುಕ್ರಮವಾಗಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕದ್ದು.

[1][**4. ಕಾರ್ಮಿಕ ಸಂಘಗಳು ಮತ್ತು ಕೆಲಸಗಾರರೊಂದಿಗೆ ಸಮಾಲೋಚಿಸುವ ರೀತಿ.–** (1) ನಿಯೋಜಕನು 3ನೇ ಪ್ರಕರಣದ ಉದ್ದೇಶಕ್ಕಾಗಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ರಜಾದಿನಗಳ ಪಟ್ಟಿಯಿಂದ, ರಜಾದಿನಗಳ ಒಂದು ತಾತ್ಕಾಲಿಕ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಕಾರ್ಮಿಕ ಸಂಘಗಳಿಗೆ ಅಥವಾ ಯಾವುದೇ ಕಾರ್ಮಿಕ ಸಂಘ ಇಲ್ಲದಿದ್ದರೆ, ಉದ್ಯೋಗಿಗಳಿಗೆ ಅಥವಾ ಅವರ ಅಧಿಕೃತ ಪ್ರತಿನಿಧಿಗಳಿಗೆ, ಅದನ್ನು ಕಳುಹಿಸಿ ಅದು ಸ್ವೀಕೃತವಾದ ಹದಿನೈದು ದಿನಗಳೊಳಗಾಗಿ, ಅದಕ್ಕೆ ಸಂಬಂಧಪಟ್ಟಂತೆ ಅವರ ಆಕ್ಷೇಪಣೆಗಳು, ಸೂಚನೆಗಳು ಮತ್ತು ಸಲಹೆಗಳು ಏನಾದರೂ ಇದ್ದರೆ ಅದನ್ನು ಸಲ್ಲಿಸುವಂತೆ ತಿಳಿಸತಕ್ಕದ್ದು.

(2) (1)ನೇ ಉಪನಿಯಮದ ಮೇರೆಗೆ ತಿಳಿಸಿದ ಕಾಲಾವಧಿಯ ಒಳಗೆ ಆಕ್ಷೇಪಣೆಗಳನ್ನು ಅಥವಾ ಸಲಹೆಗಳನ್ನು ಸಲ್ಲಿಸದಿದ್ದರೆ ಅಥವಾ ಕಾರ್ಮಿಕ ಸಂಘಗಳು ಅಥವಾ ಯಾವುದೇ ಕಾರ್ಮಿಕ ಸಂಘವು ಇಲ್ಲದಿದ್ದರೆ ಉದ್ಯೋಗಿಗಳು ಅಥವಾ ಅವರ ಪ್ರತಿನಿಧಿಗಳು ಆ ತಾತ್ಕಾಲಿಕ ಪಟ್ಟಿಗೆ ಒಪ್ಪಿಗೆ ನೀಡಿದರೆ ನಿಯೋಜಕನು, 5ನೇ ನಿಯಮದ (1)ನೇ ಉಪನಿಯಮದ ಅನುಸಾರವಾಗಿ ಅದನ್ನು ಪ್ರದರ್ಶಿಸುವ ಮೂಲಕ ನಿರ್ದಿಷ್ಟಪಡಿಸುವುದಕ್ಕೆ ಕ್ರಮಕೈಗೊಳ್ಳತಕ್ಕದ್ದು, ಅದಕ್ಕೆ ಅಸಮ್ಮತಿ ಏನಾದರೂ ಇದ್ದಲ್ಲಿ 2ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಅವನು ಕ್ರಮ ಕೈಗೊಳ್ಳತಕ್ಕದ್ದು.

**5. ನಿಯೋಜಕನು ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ.–** (1) ರಾಜ್ಯ ಪತ್ರದಲ್ಲಿ ಈ ನಿಯಮಗಳನ್ನು ಪ್ರಕಟಿಸಿದ ದಿನಾಂಕದಿಂದ, ಆ ದಿನಾಂಕದಂದು ಕೈಗಾರಿಕಾ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೆ, ಮೂವತ್ತು

ದಿನಗಳ ಒಳಗಾಗಿ ಮತ್ತು ಹೊಸ ಕೈಗಾರಿಕಾ ಸಂಸ್ಥೆಗಳಾದರೆ ಅದು ಕೆಲಸವನ್ನು ಪ್ರಾರಂಭಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ, ಕೈಗಾರಿಕಾ ಸಂಸ್ಥೆಯ ನಿಯೋಜಕನು, 4ನೇ ನಿಯಮದ ಮೇರೆಗೆ ಸಮಾಲೋಚಿಸಿದ ತರುವಾಯ, 3ನೇ ಪ್ರಕರಣದ ಮೇರೆಗೆ ಅನುಮತಿಸಿದ ಮತ್ತು ಕ್ಯಾಲೆಂಡರ್ ವರ್ಷದಲ್ಲಿ ಆ ರಜಾದಿನಗಳು ವೇತನದ ರಜಾದಿನಗಳೆಂದು ಘೋಷಿಸಿದ ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳ ಪಟ್ಟಿಯನ್ನು ನೋಟೀಸು ಬೋರ್ಡಿನ ಮೇಲೆ ಮತ್ತು ಸಂಸ್ಥೆಯಲ್ಲಿನ ಯಾವುದೇ ಇತರ ಎದ್ದುಕಾಣುವ ಸ್ಥಳದಲ್ಲಿ, ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಂಬಂಧಪಟ್ಟ ನೌಕರರ ಮಾಹಿತಿಗಾಗಿ ಪ್ರದರ್ಶಿಸತಕ್ಕದ್ದು:

ಪರಂತು, ಪ್ರತಿ ತರುವಾಯದ ಕ್ಯಾಲೆಂಡರ್ ವರ್ಷಕ್ಕಾಗಿ ರಜಾದಿನಗಳನ್ನು ಘೋಷಿಸಬೇಕಾದ ಸಂದರ್ಭದಲ್ಲಿ ಅಂಥ ಘೋಷಣೆಯನ್ನು ಪ್ರತಿವರ್ಷ 31ನೇ ಡಿಸೆಂಬರ್‌ಗೆ ಮುಂಚಿತವಾಗಿ ಒಂದು ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

**6. 3ನೇ ಪ್ರಕರಣದ ಮೇರೆಗಿನ ವಿವಾದಗಳನ್ನು ತೀರ್ಮಾನಿಸುವುದು.–** (1) 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ತೀರ್ಮಾನಕ್ಕಾಗಿ ಒಪ್ಪಿಸಿದ ವಿವಾದವನ್ನು ಇನ್‌ಸ್ಪೆಕ್ಟರನು ಸ್ವೀಕರಿಸಿದ ತರುವಾಯ ಸಾಧ್ಯವಾಗಬಹುದಾದಷ್ಟು ಬೇಗನೆ, ವಿವಾದದ ಕುರಿತಂತೆ ತಮ್ಮ ಆಕ್ಷೇಪಣೆಗಳನ್ನು ಅಥವಾ ಸಲಹೆಗಳನ್ನು ಅಥವಾ ಅಭಿಪ್ರಾಯಗಳನ್ನು ಸಲ್ಲಿಸುವುದಕ್ಕೆ ಅವನು ನಿಯೋಜಕನಿಗೆ ಮತ್ತು ಉದ್ಯೋಗಿಗಳಿಗೆ ಅಥವಾ ಅವರ ನೋಂದಾಯಿತ ಕಾರ್ಮಿಕ ಸಂಘಕ್ಕೆ ಯುಕ್ತ ಅವಕಾಶವನ್ನು ಅವನು ನೀಡಿದ ತರುವಾಯ ಮತ್ತು ಸಂದರ್ಭಾನುಸಾರ, ಅವರ ಆಕ್ಷೇಪಣೆಗಳನ್ನು ಸಲಹೆಗಳನ್ನು ಅಥವಾ ಅಭಿಪ್ರಾಯಗಳನ್ನು ಪರಿಶೀಲಿಸಿದ ತರುವಾಯ, ವಿವಾದವನ್ನು ತೀರ್ಮಾನಿಸತಕ್ಕದ್ದು.

(2) ಇನ್‌ಸ್ಪೆಕ್ಟರನು, ತೀರ್ಮಾನವನ್ನು ತೆಗೆದುಕೊಂಡ ದಿನಾಂಕದಿಂದ ಐದುದಿವಸಗಳೊಳಗಾಗಿ, ಸಂದರ್ಭಾನುಸಾರ ನಿಯೋಜಕನಿಗೆ ಮತ್ತು ಉದ್ಯೋಗಿಗಳಿಗೆ ಅಥವಾ ಸಂಬಂಧಪಟ್ಟ ಕಾರ್ಮಿಕ ಸಂಘಕ್ಕೆ ತನ್ನ ಲಿಖಿತ ತೀರ್ಮಾನವನ್ನು ತಿಳಿಸತಕ್ಕದ್ದು ಮತ್ತು ನಿಯೋಜಕನು ಆ ತರುವಾಯ, 5ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಆ ಕೂಡಲೇ ಅಂಥ ತೀರ್ಮಾನವನ್ನು ಪ್ರದರ್ಶಿಸತಕ್ಕದ್ದು.][1]

1. ಕರ್ನಾಟಕ ರಾಜ್ಯಪತ್ರ ಭಾಗ –iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ 4ನೇ, 5ನೇ ಮತ್ತು 6ನೇ ನಿಯಮಗಳನ್ನು ಪ್ರತಿಯೋಜಿಸಲಾಗಿದೆ.

[1][**7. ಇನ್‌ಸ್ಪೆಕ್ಟರ್‌ನಿಂದ ಅನುಮೋದನೆ.–** [XXX]

**8. ಡಿಸೆಂಬರ್‌ನಿಂದ 31ಕ್ಕೆ ಮುಂಚೆ ಪ್ರದರ್ಶಿಸಬೇಕಾದ ರಜಾದಿನಗಳ ವಿವರಣೆ ಪಟ್ಟಿ.–** [XXX][1]

1. ಕರ್ನಾಟಕ ರಾಜ್ಯಪತ್ರ ಭಾಗ –iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಬಿಟ್ಟುಬಿಡಲಾಗಿದೆ.

**9. ರಜಾ ದಿನಗಳಿಗೆ ಸಂದಾಯ ಮಾಡಬೇಕಾದ ಮಜೂರಿಗಳು:–** 5ನೇ ಪ್ರಕರಣದ (3)ನೇ ಉಪ–ಪ್ರಕರಣದ (i)ನೇ ಖಂಡದ ಉದ್ದೇಶಕ್ಕಾಗಿ ಉದ್ಯೋಗಿಯ ದೈನಂದಿನ ಸರಾಸರಿ ಮಜೂರಿಯನ್ನು, 3ನೇ ಪ್ರಕರಣದ ಮೇರೆಗೆ ಮಂಜೂರು ಮಾಡಿದ ರಜಾದಿನಕ್ಕೆ ನಿಕಟಪೂರ್ವದಲ್ಲಿ ಮೂವತ್ತು ದಿವಸಗಳ ಅವಧಿಯಲ್ಲಿ ಆ ಕೈಗಾರಿಕಾ ಸಂಸ್ಥೆಯಲ್ಲಿ ಅವನು ಕೆಲಸ ಮಾಡಿರುವಂಥ ದಿನಗಳಿಗಾಗಿ ಅವನ ಒಟ್ಟು ಪೂರ್ಣಕಾಲಿಕ ಮಜೂರಿಗಳ ದೈನಂದಿನ ಸರಾಸರಿಗೆ ಸಮನಾದ ದರದಲ್ಲಿ ಲೆಕ್ಕ ಹಾಕತಕ್ಕದ್ದು.

[1][**10. ಇನ್‌ಸ್ಪೆಕ್ಟರ್‌ರ ಕರ್ತವ್ಯಗಳು.–** ಇನ್‌ಸ್ಪೆಕ್ಟರ್‌ನು ಕೈಗಾರಿಕಾ ಸಂಸ್ಥೆಯನ್ನು ಪರಿಶೀಲನೆ ಮಾಡಿದ ಪ್ರತಿ ಬಾರಿಯೂ,–

(ಎ) 4ನೇ ನಿಯಮದ (1)ನೇ ಉಪನಿಯಮದ ಮೇರೆಗೆ ರಜಾದಿನಗಳ ವಿವರಣೆಪಟ್ಟಿಯನ್ನು ಪ್ರದರ್ಶಿಸಲಾಗಿದೆಯೆಂದು;

(ಬಿ) ರಜಾದಿನದ ಮಜೂರಿ ಮೊಬಲಗನ್ನು ಸಂದಾಯ ಮಾಡಲಾಗಿದೆಯೆಂದು ಅವನು ಸ್ವತಃ ಮನದಟ್ಟುಮಾಡಿಕೊಳ್ಳತಕ್ಕದ್ದು.][1]

1. ಕರ್ನಾಟಕ ರಾಜ್ಯಪತ್ರ ಭಾಗ –iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ 10ನೇ ನಿಯಮವನ್ನು ಪ್ರತಿಯೋಜಿಸಲಾಗಿದೆ.

[1][**11. ವಾರ್ಷಿಕ ವಿವರ ಪಟ್ಟಿಕೆಗಳು.–** [XXX]

**12.** **ಹಾಜರಿ ಪಟ್ಟಿ.–** [XXX][1]

1. ಕರ್ನಾಟಕ ರಾಜ್ಯಪತ್ರ ಭಾಗ –iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಬಿಟ್ಟುಬಿಡಲಾಗಿದೆ.

**13. ದಂಡನೆಗಳು.–** [1][ಈ ನಿಯಮಗಳ][1] ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. ಕರ್ನಾಟಕ ರಾಜ್ಯಪತ್ರ ಭಾಗ –iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ.

[1][ನಮೂನೆ I ರಿಂದ VI XXX][1]

1. ಕರ್ನಾಟಕ ರಾಜ್ಯಪತ್ರ ಭಾಗ –iv-2ಸಿ (i) (ವಿಶೇಷ) ಸಂಖ್ಯೆ 162 ದಿನಾಂಕ 4.2.1998 ರಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಬಿಟ್ಟುಬಿಡಲಾಗಿದೆ.

The above translation of the Karnataka Industrial Establishments (National and Festival Holidays) Act, 1963 (Karnataka Act 24 of 1963) and Karnataka Industrial Establishments (National and Festival Holidays) Rules, 1964 shall be authoriative text in the Kannada Language under section 5A of the Karnataka Official Language Act, 1963 (Karnataka Act No. 26 of 1963).

GOVERNER OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.